**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ. 287/2022**

**ದಿನಾಂಕ 15/11/2022**

ಫಿರ್ಯಾದುದಾರರು ಃ ರಾಜ್ಯದ ಪರವಾಗಿ ಗೋಣಿಬೀಡು ಪೊಲೀಸರು.

ಆರೋಪಿತರು ಃ 1. ಶ್ರೀ. ಅಶೋಕ ಬಿನ್ ಶ್ರೀಕಂಠ, 32 ವರ್ಷ ವಯಸ್ಸು

2. ಶ್ರೀ. ರತನ್ ಬಿನ್ ನಂಜುಂಡ, 32 ವರ್ಷ ವಯಸ್ಸು,

3. ಶ್ರೀ. ಅಕರ್ಪ ಹೆಚ್. ಎಸ್., ಬಿನ್. ಲೇಃ ಶೇಖರ್,
   26 ವರ್ಷ ವಯಸ್ಸು,

4. ಶ್ರೀ. ಅಭಿ, ಬಿನ್. ವೆಂಕಟೇಶ್, 23 ವರ್ಷ ವಯಸ್ಸು,

5. ಶ್ರೀ. ಪ್ರವೀಣ್ ಎ.ಸಿ., ಬಿನ್ಃ ಲೇಟ್ ಅಣ್ಣಪ್ಪ,
   22 ವರ್ಷ ವಯಸ್ಸು,

6. ಶ್ರೀ. ಸಚಿನ್ ಬಿನ್ ಚೆನ್ನಯ್ಯ , 23 ವರ್ಷ ವಯಸ್ಸು,

   ಆರೋಪಿ 1 ರಿಂದ 6 ರವರ ವಾಸಃ ಚಿನ್ನಿಗ ಕಾಲೋನಿ,
   ಗೋಣಿಬೀಡು ಹೋಬಳಿ, ಮೂಡಿಗೆರೆ ತಾಲ್ಲೂಕು.

7. ಶ್ರೀ. ಗಣೇಶ್ ಎ.ವಿ., ಬಿನ್. ಲೇಃ ವಸಂತಯ್ಯ,
   33 ವರ್ಷ ವಯಸ್ಸು,
   ವಾಸ ಅಣಜೂರು ಗ್ರಾಮ, ಗೋಣಿಬೀಡು ಹೋಬಳಿ,
   ಮೂಡಿಗೆರೆ ತಾಲ್ಲೂಕು.

**ದೋಷಾರೋಪಣೆ**

ಶ್ರೀ. ಜಯಪ್ರಕಾಶ್ ವಿ., ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಮೂಡಿಗೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಮಾಡುತ್ತಿದ್ದೇನೆ.

ದಿನಾಂಕ 24/12/2021 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ಗೋಣಿಬೀಡು ಪೋಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಅಣಜೂರು ಗ್ರಾಮದ ಚಾಸಾ-1 ರವರಿಗೆ ಸೇರಿದ ಸರ್ವೆ ನಂಃ 764 ರ ಕಾಫಿ ಮತ್ತು ಅಡಿಕೆ ತೋಟಕ್ಕೆ 7 ನೇ ಆರೋಪಿತರ ಬಾಬ್ತು ಆಟೋರಿಕ್ಷಾ ನಂಃ ಕೆಎ-18-ಬಿ-5419 ರಲ್ಲಿ ಆರೋಪಿತರೆಲ್ಲರು ಹೋಗಿ ಅಡಿಕೆ ಮರಗಳಿಂದ 50 ಕೆ.ಜಿ. ತೂಕದ ಹಸಿ ಅಡಿಕೆ ಕಾಯಿಗಳನ್ನು ಕಳವು ಮಾಡಿ ಪುನಃ ದಿನಾಂಕಃ 05/01/2022 ರಂದು ರಾತ್ರಿ ಸುಮಾರು 11.00 ಗಂಟೆ ಸಮಯದಲ್ಲಿ 7 ನೇ ಆರೋಪಿ ಬಾಬ್ತು ಆಟೋರಿಕ್ಷಾ ನಂಃ ಕೆಎ-18-ಬಿ-5419 ರಲ್ಲಿ ಹೋಗಿ ಅಡಿಕೆ ಮರಗಳಿಂದ 50 ಕೆ.ಜಿ. ತೂಕದ ಹಸಿ ಅಡಿಕೆ ಕಾಯಿಗಳನ್ನು ಕಳವು ಮಾಡಿ, ಒಟ್ಟು ರೂ.6000/- ರೂ ಮೌಲ್ಯದ ಒಂದು ಕ್ವಿಂಟಾಲ್ ನಷ್ಟು ಅಡಿಕೆ ಕಳವು ಮಾಡಿದ್ದು. ಆ ಕಾರಣ ಆರೋಪಿಯಾದ ನೀವು ಭಾ.ದಂ.ಸಂ. ಕಲಂ 379 ರಡಿಯಲ್ಲಿ ಶಿಕ್ಷಾಹರ್ವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆದ್ದರಿಂದ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕೆಂದು ನಿರ್ದೇಶಿಸಿದ್ದೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಮೂಡಿಗೆರೆ.

**<u>ಆ ರೋಪಣೆ</u>**

1. ಮೇಲಿನ ಆರೋಪಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರಃ 1.

2.

3.

೨. ಆರೋಪಗಳನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ 1.

2.

3.

ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ

ಮೂಡಿಗೆರೆ.